ದಿನಾಂಕಃ 30-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ- ವಾದಿ ಪರವಾಗಿಃ ಶ್ರೀ. ಹೆಚ್.ಆರ್. ವಕೀಲರಿಂದಃ-**

ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳೆಲ್ಲಾ ಸರಿಯಾಗಿವೆ ಮತ್ತು ಸತ್ಯವಾಗಿವೆ ಎಂದು ಪ್ರಮಾಣೀಕರಿಸಿ ನನ್ನ ಸಹಿ ಮಾಡಿರುತ್ತೇನೆ.

ಈ ದಾವೆಗೆ ಸಂಬಂಧಿಸಿದಂತೆ, ಪ್ರತಿವಾದಿ ಬರೆದುಕೊಟ್ಟ ಕ್ರಯದ ಕರಾರು ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ1 ಎಂದು ಗುರುತಿಸಲಾಯಿತು. ಅದರಲ್ಲಿರುವ ಪ್ರತಿವಾದಿಯ ಸಹಿಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ನಿಪಿ.1(ಎ) ರಿಂದ (ಡಿ) ಎಂದು ಗುರುತಿಸಲಾಯಿತು. ನಿಪಿ.1 ರ ಕ್ರಯದ ಕರಾರು ಪತ್ರಕ್ಕೆ ಹನುಮಂತರೆಡ್ಡಿ ಮತ್ತು ಚಲಪತಿ ಎಂಬುವವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. ನಿಪಿ.1 ರ ಕ್ರಯ ಕರಾರು ಪತ್ರವನ್ನು ಹೆಚ್.ಕೆ.ರಂಗನಾಥ ಎಂಬುವವರು ಬರೆದು ಬಿಕ್ಲಂದಾರರಾಗಿ ಸಹಿ ಮಾಡಿರುತ್ತಾರೆ. ದಾವಾ ಆಸ್ತಿಗೆ ಸಂಬಂಧಪಟ್ಟ ಎಂ.ಆರ್.ಹೆಚ್.58/2006-07 ಮತ್ತು ಎಂ.ಆರ್.ಹೆಚ್.59/2006-07 ರ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ.2 ಮತ್ತು 3 ಎಂದು ಗುರುತಿಸಲಾಯಿತು. ದಾವಾ ಆಸ್ತಿಗಳಿಗೆ ಸಂಬಂಧಪಟ್ಟ ಸ.ನಂ.106/ಪಿ-ಪಿ1 ರ ಒಂದು ಗಣಕೀಕೃತ ಪಹಣಿ ಪತ್ರಿಕೆಯನ್ನು

ಹಾಜರುಪಡಿಸಿದ್ದು ಅದನ್ನು ನಿಪಿ.4 ಎಂದು, ಸ.ನಂ.106/ಪಿ9 ರ ಒಂದು ಗಣಕೀಕೃತ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ.5 ಎಂದು, ಸ.ನಂ.106/ಪಿ10 ರ ಒಂದು ಗಣಕೀಕೃತ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ.6 ಎಂದು, ಸ.ನಂ.106 ರ ಗಣಕೀಕೃತ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು (ಒಟ್ಟು 8 ಪುಟಗಳಿದ್ದು ಅದರಲ್ಲಿ ಪುಟ ಸಂ.6 ಮತ್ತು 7 ನ್ನು ಒಟ್ಟಾರೆಯಾಗಿ) ಅದನ್ನು ನಿಪಿ.7 ಎಂದು ಗುರುತಿಸಲಾಯಿತು.

ಆದ್ದರಿಂದ, ದಾವೆಯನ್ನು ಡಿಕ್ರಿ ಮಾಡಬೇಕಾಗಿ ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲುಃ- ಪ್ರತಿವಾದಿ ಪರ ವಕೀಲರಿಂದಃ-**

ಈ ಹಂತದಲ್ಲಿ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ